## ಕಳೆದ ಸಂಚಿಕೆಯಲ್ಲಿ



ಬಹರೇನ್‌ನಲ್ಲಿ ನಡೆದ ರೇಚಲ್‌ಳ ಮಗನ ಮದುವೆ ನ್ಯಾನ್ಸಿಯ ಪಾಲಿಗೆ ಸಂಬಂಧಗಳನ್ನು ನವೀಕರಿಸಿಕೊಳ್ಳುವ ಹಾಗೂ ಹಳೆಯ ನೆನಪುಗಳನ್ನು ನೇವರಿಸುವ ಅಪೂರ್ವ ಅವಕಾಶವಾಗಿ ಪರಿಣಮಿಸಿತು. ಇಸ್ಲಾಂ ಸಂಸ್ಕೃತಿಯ ದೇಶದಲ್ಲಿ ಹೊಸ ಜನ ಹಾಗೂ ಸಾಮಾಜಿಕ ಸನ್ನಿವೇಶವನ್ನು ನ್ಯಾನ್ಸಿ ಮುಕ್ತ ಮನಸ್ಸಿನಿಂದ ಆನಂದಿಸಿದಳು. ಬಂಧುಬಳಗದೊಂದಿಗಿನ ಒಡನಾಟ ಮಾರ್ಕೋನೊಂದಿಗಿನ ಕಹಿ ಅನುಭವಗಳನ್ನು ತಾತ್ಕಾಲಿಕವಾಗಿ ಮರೆಸಿತು. ಆದರೆ, ಅರಬ್ ದೇಶದ ಪ್ರವಾಸದ ಸಂತಸ ಕೊನೆಯಲ್ಲಿ ಕಹಿಯಾಗಿ ಪರಿಣಮಿಸಿತು. ತನ್ನ ಅಪ್ಪನ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿದ ನೀಲ್, ಅಪ್ಪನೊಂದಿಗೆ ಇರುವುದು ತನಗೆ ಇಷ್ಟವೆಂದು ಹೇಳಿದ್ದಲ್ಲದೆ, ಅದಕ್ಕಾಗಿ ಹಟವನ್ನೂ ಮಾಡಿದಾಗ ನ್ಯಾನ್ಸಿ ಮಾನಸಿಕವಾಗಿ ಕುಸಿದಳು. ನೀಲ್‌ನನ್ನು ಮಾರ್ಕೋನ ಬಳಿಗೆ ಕಳುಹಿಸದೆ ಗತ್ಯಂತರವಿರಲಿಲ್ಲ. ಮತ್ತೆ ಒಂಟಿಯಾದ ನ್ಯಾನ್ಸಿ, ಬದುಕಿನ ಬಗ್ಗೆ ಭರವಸೆ ಕಳೆದುಕೊಳ್ಳದೆ ಮಸಾಜ್ ಪಾರ್ಲರ್ ಆರಂಭಿಸಿದಳು. 'ನ್ಯಾನ್ಸಿ ಮಸಾಜ್ ಪಾರ್ಲರ್' ಅವಳ ಬದುಕಿನಲ್ಲಿ ಸ್ವಾವಲಂಬನೆ ಹಾಗೂ ಆತ್ಮವಿಶ್ವಾಸದ ಹೊಸ ಅಧ್ಯಾಯವನ್ನು ಆರಂಭಿಸಿತು.

ಆರಾಮದಾಯಕ ಕುರ್ಚಿಯಲ್ಲಿ ಕೂರಿಸಿ ಅಥವಾ ಹಾಸಿಗೆಯಲ್ಲಿ ಮಲಗಿಸಿ ಮಸಾಜು ಮಾಡಲಾಗುತ್ತದೆ. ಗ್ರಾಹಕರು 35 ಅಥವಾ 50 ಅಥವಾ 75 ನಿಮಿಷದ ಅವಧಿಯ ಮಸಾಜನ್ನು ಆಯ್ಕೆ ಮಾಡಿಕೊಳ್ಳಬಹುದು. ಭುಜ, ಕೈ, ಬೆನ್ನು, ಮುಖ ಮತ್ತು ತಲೆಗೆ ಮಸಾಜ್ ಮಾಡಲಾಗುತ್ತದೆ. ಮಸಾಜ್ ಶರೀರದ ಮೂರು ದೋಷ ವಾತ, ಪಿತ್ತ ಮತ್ತು ಕಫವನ್ನು ಸಮತೋಲದಲ್ಲಿಡುತ್ತದೆ.

ಕೈರಾಲಿಯ ಲಾಭಗಳೇನು?

ಮಸಾಜ್ ಒಂದು ಚಿಕಿತ್ಸಾ ಪದ್ಧತಿಯಾಗಿದ್ದು, ಇದರಿಂದ ವಿಷ ವಸ್ತುಗಳನ್ನು ಹೊರತೆಗೆದು, ರಕ್ತ ಸಂಚಲನವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗುತ್ತದೆ. ಮಾಂಸಖಂಡಗಳ ಬಿಗಿತ, ಸೆಳೆತವನ್ನು ದೂರ ಮಾಡಿ ಅವುಗಳನ್ನು ಮೃದುಗೊಳಿಸುತ್ತದೆ. ಪ್ರತಿರಕ್ಷಣೆಯನ್ನು ಸಬಲಗೊಳಿಸಿ ಶಕ್ತಿಯನ್ನು ತುಂಬುತ್ತದೆ. ಚಿಂತೆ ಮತ್ತು ಒತ್ತಡದಿಂದ ಮುಕ್ತಿ ದೊರೆಯುತ್ತದೆ.

ಬುಕಿಂಗ್ ಮಾಡುವುದು ಹೇಗೆ?

ಆನ್‌ಲೈನ್ ಬುಕಿಂಗನ್ನು ದಯವಿಟ್ಟು ನಿಮ್ಮ ಈ ವೆಬ್‌ಸೈಟಿನಲ್ಲಿ ಮಾಡಿ. ಐಚ್ಛಿಕವಾಗಿ ಫೋನ್ ನಂಬರ್ 2134151ಕ್ಕೆ ಡಯಲ್ ಮಾಡಿ. ನಿಮ್ಮನ್ನು ಮೊಬೈಲ್‌ನಲ್ಲಿ ಆದಷ್ಟು ಶೀಘ್ರವೇ ಸಂಪರ್ಕಿಸಲಾಗುವುದು.

ಕೈರಾಲಿ ಮಸಾಜ್‌ಗೆ ಹಣವನ್ನು ಹೇಗೆ ಪಾವತಿಸುವುದು?

ಆನ್‌ಲೈನ್ ಅಥವಾ ನಗದು ಮೂಲಕ ಹಣವನ್ನು ಪಾವತಿಸಬಹುದು.

ನಾನು ನ್ಯಾನ್ಸಿಯ ಪಾರ್ಲರ್‌ನಲ್ಲಿ ಐವತ್ತು ನಿಮಿಷಗಳ ಮಸಾಜಿಗಾಗಿ ಆನ್‌ಲೈನ್ ಬುಕಿಂಗ್ ಮಾಡಿದೆ; ಮರುದಿನ ಮೂರು ಗಂಟೆಗೆ ಅಪಾಯಿಂಟ್‌ಮೆಂಟ್ ತೆಗೆದುಕೊಂಡು ಪಾರ್ಲರ್‌ಗೆ ಹೋದೆ. ಪಾರ್ಲರ್ ಬೇಸ್‌ಮೆಂಟಿನಲ್ಲಿತ್ತು, ಹೀಗಾಗಿ ನಾನು ಮೆಟ್ಟಿಲುಗಳಲ್ಲಿ ಇಳಿಯಬೇಕಾಯಿತು.

ನ್ಯಾನ್ಸಿ ರಿಸೆಪ್ಶನ್‌ನಲ್ಲಿ ಒಂಟಿಯಾಗಿ ಕೂತಿದ್ದಳು. ಅವಳು ಬಿಳಿ ಬಣ್ಣದ ಉದ್ದನೆಯ ಸ್ಕರ್ಟ್ ಮತ್ತು ಹಸುರು ಬಣ್ಣದ ಟಾಪ್ ಧರಿಸಿದ್ದಳು; ಅವು ಒಂದು ಶಾಂತಿಮಯ ಉಡುಪುಗಳೆಂದು ತೋರುತ್ತಿತ್ತು. ಅವಳು ತುಂಬಾ ಸುಂದರಿಯಾಗಿರಲಿಲ್ಲ. ಆದರೆ ಅವಳಲ್ಲಿ ಒಂದು ವಿಶೇಷ ಆಕರ್ಷಣೆಯಿತ್ತು ಎಂಬುದನ್ನು ಅಲ್ಲಗಳೆಯಲಾಗದು.

ಶ್ವೇತ ಹೂಕುಂಡಗಳಲ್ಲಿ ಹಸುರು ಗಿಡಗಳು ತಾಜಾತನವನ್ನು ಹರಡುತ್ತಿದ್ದವು. ಆರ್ಟಿಫಿಶಿಯಲ್ ಫೌಂಟೇನ್‌ಗಳಲ್ಲಿ ನಿರಂತರವಾಗಿ ಹರಿಯುವ ನೀರು ಮನಸ್ಸನ್ನು ಆಹ್ಲಾದಗೊಳಿಸುತ್ತಿತ್ತು. ಕೆಳಭಾಗದಲ್ಲಿದ್ದ ಪಾರ್ಲರನ್ನು ತುಂಬಾ ಆಕರ್ಷಕವಾಗಿ ಮತ್ತು ಕಲಾತ್ಮಕವಾಗಿ ಶೃಂಗರಿಸಲಾಗಿದ್ದು, ಅದೊಂದು ಸುಂದರ ತಾಣವಾಗಿ ತೋರುತ್ತಿತ್ತು.

ಅವಳು ಉತ್ಸಾಹದಿಂದ ನನ್ನನ್ನು ಸ್ವಾಗತಿಸುತ್ತಾ ಕೇಳಿದಳು, 'ನೀವು ಯಾವ ಭಾಷೆಯಲ್ಲಿ ಮಾತನಾಡಲು ಬಯಸುತ್ತೀರ, ಇಂಗ್ಲಿಷ್ ಅಥವಾ ಡ್ಯಾನಿಶ್?'

'ಡ್ಯಾನಿಶ್' ಎಂದೆ ನಾನು.

ನಮ್ಮ ಮಾತುಕತೆ ಡ್ಯಾನಿಶ್ ಭಾಷೆಯಲ್ಲಿ ಆರಂಭವಾಯಿತು. ಆದರೆ ಅದು ಶೀಘ್ರವೇ ಇಂಗ್ಲಿಷ್‌ಗೆ ಶಿಫ್ಟ್ ಆಯಿತು. ಏಕೆಂದರೆ ನನ್ನ ಡ್ಯಾನಿಶ್ ಉತ್ತಮವಾಗಿರಲಿಲ್ಲ, ಅವಳ ಡ್ಯಾನಿಶ್ ಸಹ ಉತ್ತಮವಾಗಿರಲಿಲ್ಲ.

ಅವಳು ನನ್ನ ಮುಖದಲ್ಲಿ ಬೆಳೆದ ಗಡ್ಡವನ್ನು ನೋಡುತ್ತಾ ಹೇಳಿದಳು, 'ನೈಸ್ ಬಿಯರ್ಡ್! ಪ್ಲೀಸ್' – ಅವಳು ನನಗೆ ಸೋಫಾದಲ್ಲಿ ಕೂರುವಂತೆ ಸಂಜ್ಞೆ ಮಾಡಿ ಒಳಗೆ ಹೋದಳು. ಕೆಲವೇ ಕ್ಷಣಗಳಲ್ಲಿ ನನಗೆ ತಾಜಾ ಹಣ್ಣುಗಳು ಮತ್ತು ತರಕಾರಿಗಳಿಂದ ಸ್ಮೂಥಿ ಮಾಡಿಕೊಂಡು ಬಂದಳು.

ನಾನು ಅವಳನ್ನು ಪ್ರಶ್ನಾರ್ಥಕ ದೃಷ್ಟಿಯಿಂದ ನೋಡಿದೆ.

'ಇದು ಕಾಂಪ್ಲಿಮೆಂಟರಿ ಆರ್ಗಾನಿಕ್ ಡ್ರಿಂಕ್' ಅವಳು ಮುಗುಳ್ನಗುತ್ತಾ ಹೇಳಿದಳು.

'ಓಹ್! ಥ್ಯಾಂಕ್ ಯೂ!'

ಅವಳು ಲ್ಯಾಪ್‌ಟಾಪ್ ಸಮೀಪದಲ್ಲಿ ಕೂತು ನನ್ನ ಕೇಸ್ ಹಿಸ್ಟರಿ ತೆಗೆದುಕೊಂಡಳು; ನನ್ನ ಆರೋಗ್ಯ ಮತ್ತು ಜೀವನಶೈಲಿಯ ಬಗ್ಗೆ ವಿಚಾರಿಸಿದಳು. ನಂತರ, 'ನಿಮ್ಮ ಪ್ಯಾಕೇಜ್ ರೆಡಿ ಮಾಡಲೇ?' ಎಂದು ಕೇಳಿದಳು.

'ಅಂದರೆ?'

'ಅಂದರೆ ವೀಕ್ಲಿ ಮಸಾಜ್ ಇರುತ್ತೆ. ಒಂದು ತಿಂಗಳ ಪ್ಯಾಕೇಜಿಗೆ ಹತ್ತು ಪರ್ಸೆಂಟ್ ಡಿಸ್ಕೌಂಟ್ ಸಿಗುತ್ತೆ, ಮೂರು ತಿಂಗಳ ಪ್ಯಾಕೇಜಿಗೆ ಮೂವತ್ತು ಪರ್ಸೆಂಟ್ ಡಿಸ್ಕೌಂಟ್, ಆರು ತಿಂಗಳ ಪ್ಯಾಕೇಜಿಗೆ...'

ಗ್ರಾಹಕರನ್ನು ಬುಟ್ಟಿಗೆ ಹಾಕಿಕೊಂಡು, ಲಾಭ ಮಾಡುವುದು! ನನಗೆ ಕೆಲವು ಮಸಾಜ್ ಪಾರ್ಲರ್‌ಗಳ ಅನುಭವವಿತ್ತು. ಅವುಗಳ ಹೆಸರು ಮಾತ್ರ ಆಕರ್ಷಕವಾಗಿದ್ದವು. ಹೀಗಾಗಿ ಹೇಳಿದೆ, 'ಇವತ್ತು ಮಸಾಜ್ ಮಾಡಿಸಿಕೊಂಡು ನೋಡ್ತೀನಿ...'

'ಓ.ಕೆ.' ಅವಳು ಲ್ಯಾಪ್‌ಟಾಪ್ ಬಳಿಯಿಂದ ಎದ್ದು ನಿಂತಳು. ಅಷ್ಟರಲ್ಲಿ ನಾನು ಸ್ಮೂಥಿಯನ್ನು ಖಾಲಿ ಮಾಡಿದ್ದೆ.

'ಬನ್ನಿ' – ಅವಳು ನನ್ನನ್ನು ಮಸಾಜ್ ರೂಮಿಗೆ ಕರೆದೊಯ್ದಳು. ತೆಳು ನೀಲಿ ಬೆಳಕು, ಲಘು ಸಂಗೀತ, ಸ್ವಚ್ಛ ಮತ್ತು ಶಾಂತ ವಾತಾವರಣ. ಗೋಡೆಗಳ ಮೇಲೆ ಬೇರು–ನಾರುಗಳ ಚಿತ್ರಗಳು, ಮಸಾಜು ಮಾಡುವವರ ಭಾವಚಿತ್ರಗಳನ್ನು ಹಾಕಲಾಗಿತ್ತು. ಒಂದು ದೊಡ್ಡ ಗಡಿಯಾರ ಸಮಯವನ್ನು ತಿಳಿಸುತ್ತಿತ್ತು.

'ಬಟ್ಟೆಗಳನ್ನು ತೆಗೆಯಿರಿ' ಎಂದಳು.

ನಾನು ನಾಚಿದೆ. ಅವಳು ನನ್ನ ಹಿಂಜರಿಕೆಯನ್ನು ಗಮನಿಸಿ ಹೇಳಿದಳು, 'ನನ್ನನ್ನು ಒಬ್ಬ ವೈದ್ಯಳೆಂದೇ ತಿಳಿಯಿರಿ'. ನಂತರ ಅವಳು ನನಗೊಂದು ಗೌನ್ ಕೊಟ್ಟು ಹೊರ ಹೋದಳು.

ನಾನು ಬಟ್ಟೆಗಳನ್ನು ಕಳಚಿ ಅವಳ ಪಾರ್ಲರ್‌ನ ಗೌನ್ ಧರಿಸಿ, ಹಾಸಿಗೆಯಲ್ಲಿ ಮಲಗಿದೆ. ಕಣ್ಣುಗಳನ್ನು ಮುಚ್ಚಿದೆ. ಅವಳು ಒಳಗೆ ಬಂದಳು. ಮಸಾಜು ಮಾಡುವ ಸಲಕರಣೆಗಳನ್ನು ಸಜ್ಜು ಮಾಡಿಕೊಂಡಳು. ಕೆಲವು ಕ್ಷಣಗಳ ನಂತರ ಬಿಸಿ ಬಿಸಿ ಹರ್ಬಲ್ ಆಯುರ್ವೇದಿಕ್ ತೈಲವನ್ನು ತನ್ನ ಮೃದು ಕೈಗಳಿಗೆ ಹಚ್ಚಿಕೊಂಡು, ನನ್ನ ಬೆನ್ನು, ಮಗ್ಗಲು, ತೊಡೆ, ಕಾಲುಗಳು, ಹಿಮ್ಮಡಿಗಳು ಹೀಗೆ ನನ್ನಿಡೀ ಶರೀರದ ಮೇಲೆ ಮಸಾಜು ಮಾಡಲಾರಂಭಿಸಿದಳು. ಆರಂಭದ ಅನುಭವಗಳು ಭಿನ್ನವಾಗಿದ್ದವು. ಬಿಸಿ ತೈಲದಿಂದ ಶರೀರಕ್ಕೆ ಅಶಾಂತತೆಯ ಅನುಭವವಾದರೆ, ಮತ್ತೊಮ್ಮೆ ಶರೀರಕ್ಕೆ ನೋವಾಗುತ್ತಿದೆ ಎಂದು ಅನ್ನಿಸುತ್ತಿತ್ತು, ಮಗುದೊಮ್ಮೆ ಅತೀವ ಆಯಾಸ ಕಾಡುತ್ತಿತ್ತು.

(ಸಶೇಷ)